೭ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಟ್ಟಾ ಸ್ಥಳದ ಖುಷ್ಕಿ ಜಮೀನನ್ನು ರೈತರಿಗೆ ಕೊಡಬೇಕೆನ್ನುವ ಒತ್ತಾಯ.

ಶ್ರೀ ವಸಂತ ಬಂಗೇರ.—ಮಾನ್ಯ ಉಪಾಧ್ಯಕ್ಷರೇ, ನನಗೆ ಉತ್ತರವನ್ನು ಕೊಡಿಸುವ ದಯೆ ತೋರಬೇಕು. ದಕ್ಷಿಣ ಕನ್ನಡ ಜಿಲ್ಲೆಯು ಕೃಷಿ ಪ್ರಧಾನವಾದ ಪ್ರದೇಶ ಅಲ್ಲಿಯು ರೈತರು ತಮ್ಮ ಪಟ್ಟಾ ಸ್ಥಳದ ಒತ್ತಿಗಿರುವ ಕುಮ್ಕಿ ಸ್ಥಳದಲ್ಲಿರುವ ಸೊಪ್ಪು, ಕಟ್ಟಿಗೆ ಮಗ್ಗೆರೆಯನ್ನು ತೆಗೆದು ಹಟ್ಟಿಗೆ, ಗದ್ದೆಗೆ ಹಾಕಿದರೆ ಮಾತ್ರ ಕೃಷಿಯನ್ನು ಮಾಡಬಹುದು. ಇಲ್ಲವಾದಲ್ಲಿ ಅವರು ಕೃಷಿಯನ್ನು ಮಾಡಲಿಕ್ಕೆ ಅಸಾಧ್ಯ. ಆ ದೃಷ್ಟಿಯಿಂದ ೧೯೭೩ ರಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರು ಕುಮ್ಕಿ ಸ್ಥಳವನ್ನು ನಾಲ್ಕೂವರೆ ಜೈನ್ ಸಂಬಂಧಪಟ್ಟವರಿಗೆ ಕೊಡಬೇಕೆಂದು ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಇಂದಿನ ತನಕ ಕುಮ್ಕಿ ಸ್ಥಳ ಸಂಬಂಧಪಟ್ಟವರಿಗೆ ಮಂಜೂರಾಗಿಲ್ಲ. ಕಾರಣ ಏನು ? ಇದಕ್ಕೆ ಏನಾದರೂ ಅಡಚಣೆ ಕಾನೂನಿನ ತೊಡಕು ಇದೆಯೇ ? ಎಷ್ಟು ಸಮಯದೊಳಗೆ ಕುಮ್ಕಿ ಸ್ಥಳದ ಹಕ್ಕು ಪತ್ರವನ್ನು ಸಂಬಂಧಪಟ್ಟ ರೈತರಿಗೆ ಕೊಡುತ್ತೀರಿ ಎಂಬುದರ ವಿಚಾರದಲ್ಲಿ ವಿವರಣೆ ನೀಡಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

೨-೦೦ ಪಿ. ಎಂ.

ಶ್ರೀ ಎಂ. ರಘುಪತಿ.—ತಮಗೆ ಗೊತ್ತಿದ್ದಂತೆ ಇದಕ್ಕೆ ಒಂದು ಮಸೂದೆಯನ್ನು ಮಂಡಿಸಿದ್ದೇವೆ ಅದು ಈ ಸದನದಲ್ಲಿ ಪಾಸಾಗಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಈ ಕುಮ್ಕಿ ಸ್ಥಳದ ಬಗ್ಗೆ.....

ಉಪಾಧ್ಯಕ್ಷರು.—ಖಿಖಿಳಿರ ಕೆಳಗೆ ಚರ್ಚೆಗೆ ಅವಕಾಶ ಇಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ರಘುಪತಿ.——ಇದಕ್ಕೆ ಉತ್ತರವನ್ನು ಸಂಬಂಧಪಟ್ಟ ಮಂತ್ರಿಗಳಿಂದ ತರಿಸಿ ಕೊಡುತ್ತೇನೆ.

ಉಪಾಧ್ಯಕ್ಷರು.—ಉತ್ತರವನ್ನು ದಯವಿಟ್ಟು ತರಿಸಿಕೊಡಿ. ಮುಂದಿನ ವಿಷಯ ಮಾನ್ಯ ಕುಮಾರ ಗೌಡ ಪಾಟೀಲರದು.

ಶ್ರೀ ಕುಮಾರ ಗೌಡ ಪಾಟೀಲ್.—ಗೈರು ಹಾಜರಿ.

೮ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಬಸ್ ಡಿಪೋ ಇಲ್ಲದಿರುವುದು,

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ವಿಧಾನ ಸಭಾ ಮತಕ್ಷೇತ್ರದಲ್ಲಿ ಕೆ. ಎಸ್. ಆರ್. ಟಿ. ಸಿ. ಯ ನೂರಾರು ಬಸ್ಸುಗಳು ಏನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುತ್ತಿದ್ದು, ಬಸ್ಸುಗಳಿಂ ಕೆಟ್ಟು ನಿಂತಾಗ ರಿಪೇರಿಗಾಗಿ ಅಲ್ಲಿ ಒಂದು ಡಿಪೋ ಇಲ್ಲದಿರುವುದಿಂದಾಗಿ ಸುಮಾರು ೫೦ ಕಿಲೋ ಮೀಟರ್ ದೂರವಿರುವ ಚಿಂತಾಮಣಿ ಅಥವಾ ಚಿಕ್ಕಬಳ್ಳಾಪುರದಿಂದ ರಿಪೇರಿಯಾಗಿ ಬರಬೇಕಾಗಿದ್ದು ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಪ್ರಯುಕ್ತ ಬಾಗೇಪಲ್ಲಿಯಲ್ಲಿ ಒಂದು ಬಸ್ ಡಿಪೋವನ್ನು ಕೂಡಲೇ ತೆರೆಯಲು ವ್ಯವಸ್ಥೆ ಮಾಡುವುದಲ್ಲದೆ ಬಾಗೇಪಲ್ಲಿಯಿಂದ ರಾಜ್ಯದ ಎಲ್ಲಾ ಕಡೆಗೂ ಹಾಗೂ ಆಂಧ್ರ ಪ್ರದೇಶಕ್ಕೂ ಬಸ್ಸುಗಳು ಹೋಗುತ್ತಿರುವುದರಿಂದ ಅಲ್ಲಿ ಒಂದು ಬಸ್ ನಿಲ್ದಾಣವನ್ನು ನಿರ್ಮಿಸುವ ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳ ಪರವಾಗಿ ಉತ್ತರವನ್ನು ಹೇಳಬಯಸುತ್ತೇನೆ. ಇದು ಇಂಗ್ಲೀಷ್‌ನಲ್ಲಿದೆ, ತಾವು ದಯವಿಟ್ಟು ಕ್ಷಮಿಸಬೇಕು.

ಶ್ರೀ ಬಿ. ಲಕ್ಕಪ್ಪ.—ಅಧಿಕಾರಿಗಳಿಗೆ ಕನ್ನಡದಲ್ಲಿ ಬರೆಯುವುದಕ್ಕೆ ಬರುವುದಿಲ್ಲವೇ ?

ಶ್ರೀ ಎಂ. ರಘುಪತಿ.—ಕನ್ನಡದಲ್ಲಿಯೇ ಓದುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಕನ್ನಡದಲ್ಲಿಯೇ ಓದಬೇಕು.

ಶ್ರೀ ಎಂ ರಘುಪತಿ.—ನಾವೆಲ್ಲರೂ ಕನ್ನಡಕ್ಕೋಸ್ಕರ ಹೋರಾಟ ಮಾಡಿ ಜೈಲಿಗೆ ಹೋದವರು.

ಉಪಾಧ್ಯಕ್ಷರು.—ಉತ್ತರವನ್ನು ಓದಿ.

ಶ್ರೀ ಎಂ. ರಘುಪತಿ (ಸಾರಿಗೆ ಸಚಿವರ ಪರವಾಗಿ).—

ಬಾಗೆಪಲ್ಲಿಯು ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದೆ. ಇಲ್ಲಿಯ ಜನಸಂಖ್ಯೆ ೭೯೨೩ ಆಗಿದ್ದು ತಾಲ್ಲೂಕಿನಲ್ಲಿ ೧೯೮೧ರ ಜನಗಣತಿಯಂತೆ ೧,೨೭, ೩೦೪ ಜನಸಂಖ್ಯೆ ಇರುತ್ತದೆ. ಈ ಜಿಲ್ಲೆಯು ಆಂಧ್ರ ಪ್ರದೇಶದ ಗಡಿಗೆ ಹತ್ತಿರವಾಗಿದೆ.

ಕ.ರಾ.ರ.ಸಾ. ಸಂಸ್ಥೆಯು ಬಾಗೇಪಲ್ಲಿ ಹಾಗೂ ಸುತ್ತಮುತ್ತಲಿನ ಸ್ಥಳಗಳಿಗೆ ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿ ಡಿಪೋಗಳಿಂದ ವಾಹನಗಳನ್ನು ಓಡಿಸಲಾಗುತ್ತಿದೆ. ಈ ಡಿಪೋಗಳು ಬಾಗೇಪಲ್ಲಿಯಿಂದ ಕ್ರಮವಾಗಿ ೪೨ ಕಿ.ಮೀ. ಮತ್ತು ೫೨ ಕಿ.ಮೀ.ಗಳ ಅಂತರದಲ್ಲಿರುತ್ತದೆ. ಅಲ್ಲದೆ ಬೆಂಗಳೂರು ವಿಭಾಗದಿಂದ ಕೂಡ ಹಲವಾರು ಸಾರಿಗೆ ವಾಹನಗಳು ಬಾಗೇಪಲ್ಲಿಯ ಮಾರ್ಗವಾಗಿ ಚಲಿಸುತ್ತವೆ. ಈ ಸಾರಿಗೆ ಸೇವೆಗಳಿಂದಾಗಿ ಬಾಗೇಪಲ್ಲಿಯ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯವನ್ನು ಹೊಂದಿರುತ್ತದೆ. ದಿನಾಂಕ ೩೦-೩-೧೯೮೮ರ ಕರ್ನಾಟಕ ಗೆಜೆಟ್‌ನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೋಲಾರ ಜಿಲ್ಲೆಯ ಉಳಿದ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವ ಯೋಜನೆಯನ್ನು ಪ್ರಕಟಿಸಿದೆ ಈ ರಾಷ್ಟ್ರೀಕರಣದೊಂದಿಗೆ ಹೆಚ್ಚಿನ ಸಾರಿಗೆ ಸಂಚಾರವನ್ನು ಮಾಡಲೇಬೇಕಾಗುತ್ತದೆ. ಈ ಅಧಿಕ ಸಾರಿಗೆಯಿಂದಾಗಿ ವಾಹನಗಳಿಗೆ ವಸತಿ ಮಂತ್ರ ನಿರ್ವಹಣೆಯ ಸೌಲಭ್ಯವನ್ನು ಒದಗಿಸಬೇಕಾಗಿರುವುದರಿಂದ ಕ.ರಾ.ರ.ಸಾ. ಸಂಸ್ಥೆಯು ಹೆಚ್ಚಿಗೆ ಡಿಪೋಗಳನ್ನು ತೆರೆಯಲು ಉದ್ದೇಶಿಸಿದೆ. ಆದಾಗ್ಯೂ ಡಿಪೋ ಸ್ಥಾಪಿಸಬೇಕಾಗಿರುವ ಸ್ಥಳವು ಆದಾಯ ರಹಿತ ಕಿ.ಮೀ.ಗಳು ಕಡಿಮೆ ಇರಬೇಕು ಮತ್ತು ಆರ್ಥಿಕ ಸಾಮರ್ಥ್ಯ ಹೊಂದಿರಬೇಕು ಜೊತೆಗೆ ಪ್ರಯಾಣಿಕರ ಒತ್ತಡವನ್ನು ಇಂತಹ ಸ್ಥಳಗಳಲ್ಲಿ ಗಮನಿಸಬೇಕಾಗುತ್ತದೆ.

ಪ್ರಸ್ತುತ, ಸಂಸ್ಥೆಯು ಬಾಗೇಪಲ್ಲಿಯಲ್ಲಿ ಡಿಪೋ ಅಥವಾ ಬಸ್ ನಿಲ್ದಾಣಕ್ಕಾಗಿ ತನ್ನದೇ ಆದ ಜಮೀನನ್ನು ಹೊಂದಿರುವುದಿಲ್ಲ. ಸಂಸ್ಥೆಯು ಆವಶ್ಯಕತೆಯನ್ನು ಗಮನಿಸಿ ಸೂಕ್ತವಾದ ಜಮೀನನ್ನು ವಶಪಡಿಸಿಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

೯. ಮಂಗಳೂರು ನಗರ ಪಾಲಿಕೆಗೆ ಬರಬೇಕಾದ ೮೭-೮೮ ಆಕ್ಟ್ರಾಯ್ ಗ್ರಾಂಟ್ ಬಿಡುಗಡೆ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ. ಡಿಸೌಜ.— ಮಾನ್ಯ ಅಧ್ಯಕ್ಷರೇ. ಮಂಗಳೂರು ನಗರಪಾಲಿಕೆಗೆ ಸರ್ಕಾರದಿಂದ ೧೯೮೭-೮೮ನೇ ಸಾಲಿಗೆ ಬರಬೇಕಾದ ಆಕ್ಟ್ರಾಯ್ ಗ್ರಾಂಟ್ ಒಂದು ಕೋಟಿ ೩೯ ಲಕ್ಷದ ೫೦ ಸಾವಿರ ರೂಪಾಯಿಗಳು, ಇನ್ನೂ ಬಾರದೆ ಇರುವುದರಿಂದ ಹಣದ ಅಡಚಣೆ ಅಧಿಕವಾಗಿದ್ದು ನಗರ ಪಾಲಿಕೆಯ ಕೆಲಸಕಾರ್ಯಗಳೆಲ್ಲಾ ಸ್ಥಗಿತವಾಗಿವೆ. ಈ ಹಣದ ಅಡಚಣೆಯನ್ನು ನೀಗಿಸುವ ದೃಷ್ಟಿಯಿಂದ ಸರ್ಕಾರದವರು ಸದರಿ ಗ್ರಾಂಟನ್ನು ಕೂಡಲೇ ಬಿಡುಗಡೆ ಮಾಡಿದಲ್ಲಿ ಇನ್ನುಳಿದಿರುವ ೨ ತಿಂಗಳ ಬೇಸಿಗೆ ಕಾಲದಲ್ಲಿ ನಗರ ಪಾಲಿಕೆಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಅಣುವಾಗುವುದರಿಂದ ಕೂಡಲೇ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ,

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಮೊದಲ ಕಂತಿನ ಹಣವನ್ನು ೫೧,೧೦,೫೮೫ ರೂ.ಗಳನ್ನು ದಿ. ೨೨-೧೨-೧೯೮೭ರಂದು ಬಿಡುಗಡೆ ಮಾಡಲಾಗಿದೆ. ಇನ್ನೂ ಇದರ ಬಾಬ್ತು ೧೩೫,೯೧,೬೦೭ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಈ ಬಗ್ಗೆ ನಾವು ಆರ್ಥಿಕ ಇಲಾಖೆಗೆ ಬರೆದಿದ್ದೇವೆ. ಅವರಿಂದ ಅನುಮತಿ ಬಂದ ತಕ್ಷಣ ಈ ಅನುದಾನವನ್ನು ಸಹ ಬಿಡುಗಡೆ ಮಾಡುತ್ತೇವೆ, ಈ ಬಗ್ಗೆ ನಾವು ಕ್ರಮ ಕೈಕೊಂಡಿದ್ದೇವೆ.

ಶ್ರೀಮತಿ ಸುಮಾ ವಸಂತ್.— (ಸದಸ್ಯರು ಹಾಜರಿಲ್ಲ).